೨೦) ಕೃಷಿಯಲ್ಲಿ.—ಪ್ಲಾಸ್ಟಿಕ್ ಬಳಿಕೆ ಯೋಜನೆಯಡಿಯಲ್ಲಿ ಗ್ರೀನ್‌ಹೌಸ್ ನಿರ್ಮಾಣಕ್ಕಾಗಿ ಸಹಾಯ ಧನ ನೀಡಲಾಗುತ್ತಿದೆ. ಇದರಲ್ಲಿ ಕಡಿಮೆ ವೆಚ್ಚದ ಗ್ರೀನ್ ಹೌಸ್‌ಗೆ ಶೇ.೫೦ ರಷ್ಟು ಗರಿಷ್ಠ ೩೧,೨೫೦ ರೂ. ಗಳಿಗೆ ಮಿತಿಗೊಳಿಸಿ ಮಧ್ಯಮ ವೆಚ್ಚದ ಗ್ರೀನ್ ಹೌಸ್ ನಿರ್ಮಾಣಕ್ಕಾಗಿ ಶೇ.೪೦ ರಷ್ಟು ಗರಿಷ್ಠ ೧.೦ ಲಕ್ಷ ರೂ. ಗಳಿಗೆ ಮಿತಿಗೊಳಿಸಿ ಮತ್ತು ಅಧಿಕ ವೆಚ್ಚದ ಗ್ರೀನ್ ಹೌಸ್ ನಿರ್ಮಾಣಕ್ಕಾಗಿ ಶೇಕಡ ೧೦ ರಷ್ಟು ಗರಿಷ್ಠ ೧.೦ ಲಕ್ಷ ರೂ.ಗಳಿಗೆ ಮಿತಿಗೊಳಿಸಿ ಸಹಾಯ ಧನವನ್ನು ನೀಡಲಾಗುತ್ತಿದೆ.

೨೧) ಒಂದು ಹವಾ.—ನಿಯಂತ್ರಿತ ಪುಷ್ಪಗಳ ಹರಾಜು ಕೇಂದ್ರವನ್ನು ಬೆಂಗಳೂರಿನಲ್ಲಿರುವ ಇಂದಿರಾ ನಗರ ತೋಟಗಾರಿಕೆ ಕ್ಷೇತ್ರದಲ್ಲಿ ನಿರ್ಮಿಸಲಾಗುತ್ತಿದೆ.

೨೨) ಬೆಂಗಳೂರಿನಲ್ಲಿರುವ.—ಇಲಾಖಾ ಕ್ಷೇತ್ರವಾದ ಹುಳಿಮಾವಿನಲ್ಲಿ ೧.೪ ಕೋಟಿ ರೂ.ವೆಚ್ಚದಲ್ಲಿ ಅತ್ಯಾಧುನಿಕ ಬೃಹತ್ ಪ್ರಮಾಣದ ಟಿಷ್ಯೂಕಲ್ಚರ್ ಪ್ರಯೋಗಾಲಯವನ್ನು ನಿರ್ಮಾಣ ಮಾಡಲಾಗುತ್ತಿದೆ.

೨೩) ಕರ್ನಾಟಕ ರಾಜ್ಯದಲ್ಲಿ.—ಮಾರುಕಟ್ಟೆ ವ್ಯವಸ್ಥೆ ಬಲಪಡಿಸಲು ಹಾಪ್‌ಕಾಮ್ಸ್‌ನ ಕಾರ್ಯಕ್ಷೇತ್ರ ವಿಸ್ತರಿಸುವುದು ಮತ್ತು ಮೂಲ ಸೌಕರ್ಯಗಳಾದ ಮಾರಾಟ ಮಳಿಗೆಗಳು, ಸಂಗ್ರಹಣಾ ಕೇಂದ್ರಗಳು ಮತ್ತು ಶೀತಲ ಗೃಹಗಳ ನಿರ್ಮಾಣಕ್ಕೆ ಧನ ಸಹಾಯ ಒದಗಿಸಲಾಗಿದೆ.

೨೪) ರಾಜ್ಯದ.—ಆಯ್ದ ಸ್ಥಳಗಳಲ್ಲಿ ತೋಟಗಾರಿಕೆ ಸಂಘಗಳ ಸಹಕಾರ ಸಂಘಗಳು ಇತ್ಯಾದಿಗಳ ಮೂಲಕ ಶೀತಲ ಗೃಹ ಸ್ಥಾಪಿಸಲು ಧನ ಸಹಾಯ ನೀಡಲಾಗುತ್ತಿದೆ.

೨೫) ಆಯ್ದ.—ಹಣ್ಣು ಮತ್ತು ತರಕಾರಿಗಳ ಸಂಸ್ಕರಣಾ ಘಟಕಗಳನ್ನು ಬಲಪಡಿಸಲು ಧನ ಸಹಾಯ ನೀಡಲಾಗುತ್ತಿದೆ.

೨೬) ಹಾಪ್‌ಕಾಮ್ಸ್.—ಮೂಲಕ ಸಣ್ಣ ಮತ್ತು ಅತಿಸಣ್ಣ ರೈತರಿಗೆ ರಿಯಾಯಿತಿ ದರದಲ್ಲಿ ತರಕಾರಿ ಬೀಜ ವಿತರಿಸಲು ಕ್ರಮ ಏರ್ಪಡಿಸಲಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ 'ಅಪನಾದೇಶ್' ಕಾರ್ಯಕ್ರಮದ ಅನ್ವಯ ಆಗಿರುವ ಪ್ರಗತಿ

೫೦೧(ಳಿ೨) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಶಿವಮೊಗ್ಗ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ ವತಿಯಿಂದ ಸಾರ್ವಜನಿಕ ಸಹಭಾಗಿತ್ವದ "ಅಪ್ನಾದೇಶ್" ಕಾರ್ಯಕ್ರಮದನ್ವಯ ಸಾರ್ವಜನಿಕರಿಂದ ಬಂದಿರುವ ಮನವಿ ಎಷ್ಟು ಹಾಗೂ ಎಷ್ಟು ಮೊತ್ತದ ಕಾಮಗಾರಿ ಕೈಗೊಳ್ಳಲಾಗಿದೆ?

(ಆ) ಅದಕ್ಕಾಗಿ ರಾಜ್ಯ ಸರ್ಕಾರದಿಂದ ಶೇ. ೫೦ ರಷ್ಟು ಹಣ ಭರಿಸಲು ಒಪ್ಪಿಕೊಳ್ಳಲಾಗಿದೆಯೇ?

(ಇ) ಈ ಹಣ ಜಿಲ್ಲಾ ಪಂಚಾಯತ್ ಮೂಲಕ ಭರಿಸಲಾಗಿದೆಯೇ? (ಸಾರ್ವಜನಿಕ ಸಹಭಾಗಿತ್ವದ ವಿಶೇಷ ಯೋಜನೆ)

(ಈ) ಇದೇ ರೀತಿಯ ಯೋಜನೆಯನ್ನು ಬೇರೆ ಜಿಲ್ಲೆಗೆ ಅನ್ವಯಿಸಲು ಸರ್ಕಾರ ಯೋಚಿಸಬಹುದೇ?

ಶ್ರೀ ಎಂ. ವೈ ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

(ಅ) ಜಿಲ್ಲಾ ಪಂಚಾಯತ್ ನೇರವಾಗಿ ಹಣ ಸಂಗ್ರಹಿಸಿರುವುದಿಲ್ಲಾ. ಜನರ ಸಾಮೂಹಿಕ ಅವಶ್ಯಕತೆಗಳ ಪೂರೈಕೆಗಾಗಿ ಒಟ್ಟಿಗೆ ಶ್ರಮಿಸಲು "ಅಪ್ನಾದೇಶ್" ಅಸೋಸಿಯೇಷನ್ (ರಿ) ಎಂಬ ಸ್ವಯಂಸೇವಾ ಸಂಸ್ಥೆ ಸಂಘಟಿತಗೊಂಡಿದೆ. ನಗದು ಹಾಗೂ ವಸ್ತು ರೂಪದಲ್ಲಿ ಸಾರ್ವಜನಿಕರ ವಂತಿಕೆ ಅಂದಾಜು ರೂ. ೧೦೦ ಲಕ್ಷ ಮೀರಿದೆ. ಸಾರ್ವಜನಿಕರೇ ದೇಣಿಗೆಯನ್ನು ಸಂಗ್ರಹಿಸಿ ಕಾಮಗಾರಿಯನ್ನು ನಿಗದಿಪಡಿಸಿದಂತೆ ಅನುಷ್ಠಾನಗೊಳಿಸುವರು. ಅಂದಾಜು ರೂ. ೧೨೯ ಲಕ್ಷದ ಕಾಮಗಾರಿ ಕೈಗೊಳ್ಳಲಾಗಿದೆ.

(ಆ) ಸಾರ್ವಜನಿಕರು ಅಥವಾ ಸ್ವಯಂಸೇವಾ ಸಂಸ್ಥೆಗಳು ಮುಂದೆ ಬಂದಲ್ಲಿ ಶಾಲಾ ಕಟ್ಟಡ ನಿರ್ಮಾಣದಲ್ಲಿ ಹಾಗೂ ವಿಶ್ವಬ್ಯಾಂಕ್ ನೆರವಿನಿಂದ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗಳಿಗೆ ಕ್ರಮವಾಗಿ ಅಂದಾಜು ಪೆಚ್ಚಿದ ಶೇ. ೫೦ ಮತ್ತು ಶೇ. ೭೦ ರಷ್ಟು ಹಣವನ್ನು ಸರ್ಕಾರ ಭರಿಸುತ್ತದೆ. ಈ ವ್ಯವಸ್ಥೆ ಎಲ್ಲಾ ಜಿಲ್ಲೆಗಳಿಗೆ ಅನ್ವಯಿಸುತ್ತದೆ.

(ಇ) ಜಿಲ್ಲಾ ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ಗಳಿಂದ ಕಾಮಗಾರಿಗಳು ಅನುಮೋದಿತವಾಗಿದ್ದು ಅದೇ ಕೆಲಸಕ್ಕೆ ಸಾರ್ವಜನಿಕರು ನಗದು ಅಥವಾ ವಸ್ತು ರೂಪದ ಸಹಾಯ ನೀಡಿದರೆ ಅಂತಹ ಕಾಮಗಾರಿಗಳಿಗೆ ಹೆಚ್ಚಿಂದಾಣಿಕೆ ಖರ್ಚನ್ನು ಜಿಲ್ಲಾ ಪಂಚಾಯತ್ ಭರಿಸಿದೆ.

(ಈ) ಅದು ಸಾರ್ವಜನಿಕರ ತೊಡಗುವಿಕೆಯನ್ನು ಅವಲಂಬಿಸಿರುತ್ತದೆ.

ಕೊಡಗು ಜಿಲ್ಲೆಯಲ್ಲಿ ಕೊಳವೆ ಬಾವಿಗಳ ಬಗ್ಗೆ

೫೦೩.(೬೧೪) ಶ್ರೀಮತಿ ಸುಮಾ ವಸಂತ (ವೀರಾಜಪೇಟೆ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ೧೯೯೩–೯೪ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಮಂಜೂರಾದ ಕೊಳವೆ ಬಾವಿಗಳು ಎಷ್ಟು?

(ಆ) ಅವುಗಳಲ್ಲಿ ಉಪಯೋಗಕ್ಕೆ ಬರುವ ಕೊಳವೆ ಬಾವಿಗಳು ಎಷ್ಟು? ಹಾಗೂ ಉಪಯೋಗಕ್ಕೆ ಬಾರದ ಕೊಳವೆ ಬಾವಿಗಳು ಎಷ್ಟು? (ತಾಲ್ಲೂಕುವಾರು ವಿವರ ಕೊಡಿ)

(ಇ) ಫಲಕಾರಿಯಲ್ಲದ ಕೊಳವೆ ಬಾವಿಗಳನ್ನು ತೋಡಲು ಕಾರಣವೇನು?

(ಈ) ತಜ್ಞರಿಂದ ಆ ಜಾಗ ಪರಿಶೀಲನೆ ಮಾಡಲಿಲ್ಲವೆ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

(ಅ) ೧೬೨.

(ಆ) ಫೆಬ್ರುವರಿ ೧೯೯೪ರ ಅಂತ್ಯದವರೆಗೆ ೧೫೧ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಅವುಗಳಲ್ಲಿ ೧೩೫ ಕೊಳವೆ ಬಾವಿಗಳು ಉಪಯೋಗಕ್ಕೆ ಬರುತ್ತವೆ. ೧೬ ಕೊಳವೆ ಬಾವಿಗಳು ಉಪಯೋಗಕ್ಕೆ ಬರುವುದಿಲ್ಲ. ತಾಲ್ಲೂಕುವಾರು ವಿವರ ಈ ರೀತಿ ಇದೆ ;

ತಾಲ್ಲೂಕು	ಉಪಯೋಗಕ್ಕೆ ಬರುವ ಕೊಳವೆ ಬಾವಿಗಳು	ಉಪಯೋಗಕ್ಕೆ ಬಾರದ ಕೊಳವೆ ಬಾವಿಗಳು
೧ ಮಡಿಕೇರಿ	೩೧	೨
೨ ಸೋಮವಾರಪೇಟೆ	೪೮	೪
೩ ವೀರಾಜಪೇಟೆ	೫೬	೧೦
	೧೩೫	೧೬

(ಇ) ಕಠಿಣಾತ್ಮಕ (ಹಾರ್ಡ್‌ಕೋರ್) ಪ್ರದೇಶವಾಗಿರುವುದರಿಂದ ಕೆಲವು ಕೊಳವೆ ಬಾವಿಗಳು ವಿಫಲವಾಗಿವೆ.

(ಈ) ಭೂವಿಜ್ಞಾನಿಗಳಿಂದ ಪರಿಶೀಲನೆ ಮಾಡಲಾಗಿದೆ.